# ಅರಣ್ಯಮಾಲಿ ರೈನಾ

## ಪ್ರೀತಿಯ ತಾಯಿ

ಸಂಗ್ರಹ: **ಸ್ವರ್ಣಗೌರಿ**



ಅರಣ್ಯಮಾಲಿಯು ಪಂಡಿತ ನಾರಾಯಣ ದಾಸ ರೈನಾರ ಪತ್ನಿ. ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುವುದು, ಮತ್ತು ಬರೆಯುವುದು, ಪಾಶ್ಚಾತ್ಯ ಉಡುಪು ಧರಿಸುವುದು, ದ್ವಿಚಕ್ರ ವಾಹನ ಉಪಯೋಗಿಸುವುದು, ಇತ್ಯಾದಿ ಸಾಹಸಗಳನ್ನು ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಮಾಡಿದ ಪ್ರಥಮ ಕಾಶ್ಮೀರಿ ಪಂಡಿತ ನಾರಾಯಣದಾಸ ರೈನಾ. ಇಂತಹ ಪಂಡಿತರು ಸ್ವಾಮಿ ವಿವೇಕಾನಂದರ ಆರಾಧಕರೂ ಆಗಿದ್ದರು. ಸ್ವಾಮೀಜಿ ಒಮ್ಮೆ ಅವರ ಮನೆಗೆ ಭೇಟಿ ನೀಡಿದಾಗ ಅವರ ಮೇಲೆ ಪುಷ್ಪವೃಷ್ಟಿಗೈದು, ಹೂವಿನ ಮಾಲೆಯಿಂದ ಅವರನ್ನು ಸಿಂಗರಿಸಿದ್ದರು. ನೆರೆದ ಪಂಡಿತರೆಲ್ಲರೂ ಸ್ವಾಮೀಜಿ ಪಾಶ್ಚಾತ್ಯ ದೇಶಗಳಲ್ಲಿ ವೇದಾಂತದ ಸಂದೇಶವನ್ನು ಸಾರಿದ್ದನ್ನು ಕುರಿತು ಮನ ತುಂಬಿ ಶ್ಲಾಘಿಸಿದರು. ಸ್ವಾಮೀಜಿಯವರ ಶ್ರೀಮುಖದಿಂದ ವೇದಾಂತವನ್ನು ಕೇಳಲು ಅವರು ಇಚ್ಛಿಸಿದರು. ಸ್ವಾಮೀಜಿ ಮುಂಡಕೋಪನಿಷತ್ತಿನಿಂದ ಕೆಲವು ಮಂತ್ರಗಳನ್ನು ಪಠಿಸಿ, ಅದನ್ನು ವಿವರಿಸಿದಾಗ ಪಂಡಿತರೆಲ್ಲರೂ ಅವರ ಅಪಾರ ಜ್ಞಾನವನ್ನು ಕಂಡು ಬೆರಗಾದರು!

ಅರಣ್ಯಮಾಲಿಯು ಸ್ವಾಮಿಗಳ ಭೋಜನಕ್ಕೆಂದು ಅತ್ಯಂತ ಭಕ್ತಿ-ಶ್ರದ್ಧೆಗಳಿಂದ ವಿವಿಧ ಭಕ್ಷ್ಯಗಳನ್ನು ತಯಾರಿಸಿದ್ದಳು. ಸ್ವಾದಿಷ್ಟವಾದ ಅಕ್ಕಿ ಪಾಯಸವು ಸ್ವಾಮೀಜಿಗೆ ಮೆಚ್ಚುಗೆಯಾಯಿತು. ಇದಕ್ಕಾಗಿ ಆಕೆಯನ್ನು ಮನಃಪೂರ್ವಕವಾಗಿ ಅಭಿನಂದಿಸಿದರು. ಅರಣ್ಯಮಾಲಿಯ ಸಂಸಾರನೌಕೆಯು ಸುಗಮವಾಗಿ ಸಾಗುವ ಹಾದಿಯಲ್ಲಿ ಒಂದೇ ಒಂದು ಕೊರತೆಯಿದ್ದಿತು. ಯಾವುದೇ ಶುಶ್ರೂಷೆಗೂ ಜಗ್ಗದ ತಲೆನೋವಿನ ಬಾಧೆಯಿಂದ ಆಗಾಗ್ಗೆ ಆಕೆ ನರಳುತ್ತಿದ್ದಳು. ಸ್ವಾಮೀಜಿಯವರ ನಿರ್ಗಮನಕ್ಕೆ ಮುಂಚೆ ನಾರಾಯಣದಾಸರು ಈ ವಿಷಯವನ್ನು ಅವರಿಗೆ ತಿಳಿಸಿ, ಆಕೆಯನ್ನು ಆಶೀರ್ವದಿಸಲು ಅವರ ಬಳಿ ಪ್ರಾರ್ಥಿಸಿದರು. ಕೆಲಹೊತ್ತು ಮೌನವಾಗಿದ್ದ ಸ್ವಾಮೀಜಿ, ನಂತರ ತಮ್ಮ ಹಸ್ತವನ್ನು ಆಕೆಯ ಮಸ್ತಕದ ಮೇಲಿರಿಸಿದರು. ಮುಂದೆಂದೂ ಅರಣ್ಯಮಾಲಿಯು ತಲೆನೋವಿನಿಂದ ನರಳಲಿಲ್ಲ! ಅಷ್ಟೇ ಅಲ್ಲದೆ ಸ್ವಾಮೀಜಿ, ದಿವ್ಯ ಶಿಶು ಶಿವಯೋಗಿ ಲಕ್ಷ್ಮಣ್ ಜೂ ಜನನದ ಕುರಿತಾಗಿಯೂ ಭವಿಷ್ಯ ನುಡಿದರು.

ಆ ದಂಪತಿಗಳ ಶ್ರದ್ಧೆ, ಭಕ್ತಿ, ನಿಷ್ಠೆಗಳಿಂದ ಪ್ರಭಾವಿತರಾದ ಸ್ವಾಮೀಜಿ ಇದ್ದಕ್ಕಿದ್ದಂತೆ, "ರೈನಾಜಿ, ಭಗವಂತನ ಕೃಪಾಶೀರ್ವಾದವು ನಿಮ್ಮ ಮೇಲೆ ಉಂಟಾಗಿದೆ. ನಿಮ್ಮ ಮನೆಯನ್ನು ದೇಗುಲವನ್ನಾಗಿ ಮಾರ್ಪಡಿಸಿರುವಿರಿ. ಈ ಮನೆಯು ದಿವ್ಯ ಶಿಶುವಿನ ಜನನಕ್ಕೆ ಸೂಕ್ತವಾಗಿದೆ" ಎಂದು ಉದ್ಗರಿಸಿದರು. ಈ ಘಟನೆಯಾದ ಒಂಬತ್ತು ವರ್ಷಗಳ ನಂತರ, ಮೊದಲ ಮಗುವಿನ ಜನನದ ೧೭ ವರ್ಷಗಳ ನಂತರ, ಸ್ವಾಮಿ ಲಕ್ಷ್ಮಣ್ ಜೂವಿನ ಜನನವಾಯಿತು. ಬಾಲ್ಯದಿಂದಲೇ ಲಕ್ಷ್ಮಣ್‌ಜೂ ಸದಾ ಧ್ಯಾನ, ಸಮಾಧಿಗಳಲ್ಲೇ ಮಗ್ನರಾಗಿರುತ್ತಿದ್ದನು. ಸಂನ್ಯಾಸವನ್ನು ಸ್ವೀಕರಿಸಿದ ಈ ಬಾಲಕ ಮುಂದೆ ಭಾರತ ಹಾಗೂ ಪಾಶ್ಚಾತ್ಯ ದೇಶಗಳಲ್ಲಿ ಅನೇಕರಿಗೆ ಆಧ್ಯಾತ್ಮಿಕ ಜೀವನದಲ್ಲಿ ದಾರಿದೀಪವಾದನು. ಸರಳತೆಯ ಸಾಕಾರವಾದ ಭಕ್ತಿಮತಿ ಅರಣ್ಯಮಾಲಿ ಸಾಧು, ಸಂನ್ಯಾಸಿಗಳ ಸೇವೆಗೆಂದೇ ಜೀವನವನ್ನು ಮುಡಿಪಾಗಿಟ್ಟಿದ್ದಳು. ಸಾಧುಗಳನ್ನು ಮನೆಗೆ ಆಹ್ವಾನಿಸಿರೆಂದು ಪತಿಯನ್ನು ಬೇಡಿಕೊಳ್ಳುತ್ತಿದ್ದಳು. ಅವರುಗಳಿಗೆ ಮೃಷ್ಟಾನ್ನ ಭೋಜನವಿತ್ತು ಅತ್ಯಂತ ಶ್ರದ್ಧಾಭಕ್ತಿಗಳಿಂದ ಅವರ ಸೇವೆ ಮಾಡುತ್ತಿದ್ದಳು. ಬಡಬಗ್ಗರ, ದೀನದುಃಖಿಗಳ ಸೇವೆಯನ್ನು ಉದಾರ ಮನಸ್ಸಿನಿಂದ ಮಾಡುತ್ತಿದ್ದಳು. ಕ್ರಿ.ಶ. ೧೯೦೦ರಲ್ಲಿ ಭೀಕರ ಬಿರುಗಾಳಿಯಿಂದ ಕಾಶ್ಮೀರಿ ಜನರ ಜೀವನದಲ್ಲಿ ಹಾನಿಯುಂಟಾಯಿತು. ಅರಣ್ಯಮಾಲಿ ಆ ಸಮಯದಲ್ಲಿ ನಿರಾಶ್ರಿತರಿಗೆ ಆಹಾರ ಸಾಮಗ್ರಿಗಳನ್ನು ಒದಗಿಸುವ ಮೂಲಕ ಸೇವೆ ಸಲ್ಲಿಸಿದಳು.

"ನಾವು ಭರತಖಂಡದ ಕಾರ್ಯರಂಗಕ್ಕೆ ನಿರ್ಭೀತರಾದ ಮಹಾ ಸ್ತ್ರೀಯರನ್ನು ತರಬೇತು ಮಾಡಬೇಕು... ಮಹಾನಾಯಕರ ತಾಯಂದಿರಾಗುವುದಕ್ಕೆ ಯೋಗ್ಯರಾಗಿರಬೇಕು." *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೭, ಪು. ೪೫೩)*